


ಸುಪ್ರೀಂ ಕೋರ್ಟಿಗೆ ನಾಮ ನಿರ್ದೇಶನ ಮಾಡುವಾಗ ಬಲಪಂಥದ ಮೌಲ್ಯಗಳನ್ನೂ, ಎಡಪಂಥೀಯ ಮೌಲ್ಯಗಳನ್ನೂ ಅತಿಯಾಗಿ ನಂಬುವ ನ್ಯಾಯಮೂರ್ತಿಗಳನ್ನು ಸಾಮಾನ್ಯವಾಗಿ ಪರಿಗಣಿಸುವುದಿಲ್ಲ. ಹೆಚ್ಚಾಗಿ ಮಧ್ಯಮಮಾರ್ಗಿಗಳನ್ನೇ ಈ ಸ್ಥಾನಕ್ಕೆ ಹೆಸರಿಸುತ್ತಾರೆ. ಹೀಗೆ ನಾಮನಿರ್ದೇಶನ ಮಾಡುವ ಅವಕಾಶ ಅಧ್ಯಕ್ಷರಿಗೆ ಅಷ್ಟು ಬೇಗ ಬೇಗ ಬರುವುದೂ ಇಲ್ಲ. ಬಿಲ್ ಕ್ಲಿಂಟನ್ ಮತ್ತು ಒಬಾಮಾ ಎಂಟೆಂಟು ವರ್ಷಗಳ ಕಾಲ ಅಧ್ಯಕ್ಷರಾಗಿದ್ದರೂ ಇವರಿಬ್ಬರೂ ತಲಾ ಇಬ್ಬರು ನ್ಯಾಯಮೂರ್ತಿಗಳನ್ನಷ್ಟೇ ನೇಮಿಸಲು ಸಾಧ್ಯವಾಗಿತ್ತು.

ಆದರೆ ಡೊನಲ್ಡ್ ಟ್ರಂಪ್ ಅಧ್ಯಕ್ಷರಾಗಿದ್ದಾಗ, ಅವರ ಅದೃಷ್ಟಕ್ಕೋ ಸ್ವಾತಂತ್ರ್ಯವಾದಿಗಳ ದುರದೃಷ್ಟಕ್ಕೋ ನಾಲ್ಕೇ ವರ್ಷಗಳ ಅವಧಿಯಲ್ಲಿ ಅವರು ಮೂರು ಜನ ನ್ಯಾಯಮೂರ್ತಿಗಳನ್ನು ಸುಪ್ರೀಂ ಕೋರ್ಟಿಗೆ ನೇಮಿಸುವಂತಾಯಿತು. ಟ್ರಂಪ್ ಆಯ್ಕೆ ಮಾಡಿದ ಮೂವರೂ ನ್ಯಾಯಮೂರ್ತಿಗಳು ಕಟ್ಟಾ ಬಲಪಂಥೀಯ ವಿಚಾರವುಳ್ಳವರು. ಆಗಿನಿಂದ ಸರ್ವೋಚ್ಛ ನ್ಯಾಯಾಲಯದ ಎಲ್ಲ ತೀರ್ಪುಗಳ ಮೇಲೂ ಬಲಪಂಥೀಯ ವಿಚಾರಧಾರೆಯ ಬರೆ ಎದ್ದು ಕಾಣಿಸುತ್ತಿದೆ.

ಸ್ವಾತಂತ್ರ್ಯವಾದಿಗಳ ಇನ್ನೊಂದು ದೂರು ಎಂದರೆ, 'ಒಬಾಮಾ ಅಧ್ಯಕ್ಷರಾಗಿದ್ದಾಗ ಎರಡು ವರ್ಷ ಹೌಸ್ ಮತ್ತು ಸೆನೆಟ್ ಎರಡೂ ಅಂಗಗಳಲ್ಲಿ ಬಹುಮತವಿತ್ತು. ಆಗಲೇ ಅವರು ರೋ ವರ್ಸಸ್ ವೇಡ್ ಮತ್ತು ಪ್ಲಾನ್ಡ್ ಪೇರೆಂಟ್‌ಹುಡ್ ವರ್ಸಸ್ ಕೇಸಿನ ತೀರ್ಪುಗಳನ್ನು ಕೋಡಿಫೈ ಮಾಡಬೇಕಿತ್ತು. ಹಾಗಾಗಿದ್ದರೆ ಈ ದುರಂತ ಸಂಭವಿಸುತ್ತಿರಲಿಲ್ಲ' ಎಂಬುದು. ಹೀಗೆ ಕಾಯಿದೆಯನ್ನು ಸರಕಾರದಲ್ಲಿ ಬಹುಮತವಿರುವಾಗ ಕೋಡಿಫೈ ಮಾಡಿದ್ದರೆ ಅದು ದೇಶದ ಕಾನೂನಿನಲ್ಲಿ ಸೇರಿಹೋಗುತ್ತಿತ್ತು, ಅದನ್ನು ಅನೂರ್ಜಿತಗೊಳಿಸುವುದು ಅಸಂಭಾವ್ಯವಾಗುತ್ತಿತ್ತು ಎಂಬುದು ಇವರ ಅಂಬೋಣ. ಆದರೆ ಎಲ್ಲವೂ ಇಷ್ಟು ವೇಗವಾಗಿ ಬದಲಾಗಿಬಿಡಬಹುದು ಎಂಬುದು ಆಗ ಯಾರ ಊಹೆಗೂ ನಿಲುಕದ್ದಾಗಿತ್ತು ಎಂಬುದೂ ಸತ್ಯ.

## ಮುಂದಿನ ದಾರಿಗಳೇನು?

'ವೋಟ್ ದೇಮ್ ಔಟ್' ಎಂಬುದೊಂದೇ ಮುಂದಿನ ದಾರಿ. ನವಂಬರ್ ತಿಂಗಳಲ್ಲಿ ಮಧ್ಯಂತರ ಚುನಾವಣೆ ನಡೆಯಲಿದೆ. ಜೀವ ವಿರೋಧಿ ನೆಲೆಯನ್ನು ಪ್ರತಿಭಟಿಸುವ ಪ್ರತಿ ಪ್ರಜೆಯೂ ಜೀವಪರ ಮೌಲ್ಯಗಳನ್ನು ಪ್ರತಿಪಾದಿಸುವ ಅಭ್ಯರ್ಥಿಗಳನ್ನು ಆರಿಸಿ ಕಳಿಸಬೇಕು. ರಾಜ್ಯ ಸರ್ಕಾರಗಳಲ್ಲಿ ಯಾವ ಮೌಲ್ಯ ನಂಬುವ ಅಭ್ಯರ್ಥಿಗಳು ಅಧಿಕಾರಕ್ಕೆ ಬರುತ್ತಾರೋ ಅವೇ ಮೌಲ್ಯಗಳ ಕಾಯಿದೆಗಳೂ ಅಂಗೀಕೃತವಾಗುತ್ತವೆ.

ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯದಲ್ಲಿ ಭಾಗವಹಿಸುತ್ತ ತಮ್ಮ ಪ್ರತಿರೋಧವನ್ನು ತೋರಬಹುದು. ಜೊತೆಗೆ ದೂರದ ರಾಜ್ಯಗಳಿಗೆ ತೆರಳಿ ಗರ್ಭಪಾತ ಮಾಡಿಸಿಕೊಳ್ಳಲು ಬಡ ಹೆಣ್ಣುಮಕ್ಕಳಿಗೆ ಸಹಾಯ ಮಾಡುತ್ತಿರುವ ಸಂಘ ಸಂಸ್ಥೆಗಳಿಗೆ ಧನ ಸಹಾಯ, ನೈತಿಕ ಸ್ಥೈರ್ಯ ನೀಡಬಹುದು. ಸ್ವತಃ ಈ ಸಂಸ್ಥೆಗಳಲ್ಲಿ ವಾಲೆಂಟಿಯರ್‌ಗಳಾಗಿ ಸೇವೆ ಸಲ್ಲಿಸಬಹುದು.

ಈ ಪ್ರತಿಗಾಮಿ ವಿದ್ಯಮಾನದ ಹಿನ್ನಲೆಯಲ್ಲಿಯೇ ಜೀವ ವಿರೋಧಿಯಾದ ಇನ್ನಾವ ತೀರ್ಪುಗಳು ಅಸಿಂಧುಗೊಳ್ಳುತ್ತವೋ ಎಂಬ ಕಳವಳ ದೇಶದ ಜನರಲ್ಲಿ ಮನೆಮಾಡಿದೆ. ಅಮೆರಿಕವನ್ನೇ ಆದರ್ಶವಾಗಿಟ್ಟುಕೊಂಡ ಇತರ ದೇಶಗಳೂ ಎಲ್ಲಿ ಇಂಥವೇ ನಡೆಗಳನ್ನು ತಮ್ಮ ದೇಶಗಳಲ್ಲೂ ಅನುಸರಿಸತೊಡಗುತ್ತವೋ ಎಂಬ ಆತಂಕ ವ್ಯಕ್ತವಾಗುತ್ತಿದೆ.

ಈ ತೀರ್ಪಿನ ಸುದ್ದಿ ಜಾಹೀರಾದ ದಿನ ನಾನೂ, ನನ್ನ ಗಂಡನೂ ಬಹಳ ವ್ಯಥೆಪಟ್ಟೆವು. ನಾವು ನಂಬಿರುವ ಮೌಲ್ಯಗಳಿಗೆ ಬಲವಾಗಿ ಪೆಟ್ಟು ಬಿದ್ದಂತಾಗಿತ್ತು. ಆ ಸಂಜೆ, 'ದಿ ಅನಿಯನ್' ಎಂಬ ಲಿಬರಲ್ ಪತ್ರಿಕೆ ಒಂದಿಷ್ಟು ವಿಡಂಬನಾತ್ಮಕ ಬರಹಗಳನ್ನು ಪ್ರಕಟಿಸಿತ್ತು. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಫೋಟೊದ ಜೊತೆಗೆ 'ರೇಪಿಸ್ಟ್‌ಗಳಿಗೆ ಸಿಹಿ ಸುದ್ದಿ' ಎಂದೋ, 'ಬೆಳಿಗ್ಗೆ ಎದ್ದಾಗ ಗಡಿಯಾರ ಐವತ್ತು ವರ್ಷ ಹಿಂದೆ ಹೋಗಿದೆ' ಎಂದೋ ಪ್ರಕಟಿಸಿದ್ದ ಅಣಕು ಬರಹಗಳು ಅವು.

'ಇವೆಷ್ಟು ಹಾಸ್ಯಮಯವಾಗಿವೆ ನೋಡು' ಅಂತ ನನ್ನ ಗಂಡ ತೋರಿಸಿದ.

'ಇಟ್ ಫೀಲ್ಸ್ ಟೂ ರಿಯಲ್ ಫಾರ್ ಮೀ' ಅಂದೆ.

'ಈ ವಿಷಯವಾಗಿ ಎಂಥ ನಿರುಪದ್ರವಿ ಜೋಕುಗಳಿಗೂ ನನಗೆ ನಗಲು ಸಾಧ್ಯವಿಲ್ಲ' ಅಂದೆ.

ಅದೇಕೋ ಅದೇ ನಮ್ಮಿಬ್ಬರ ನಡುವಿನ ವ್ಯತ್ಯಾಸ ಅನ್ನಿಸಿಬಿಟ್ಟಿತು.

ಪ್ರತಿಕ್ರಿಯಿಸಿ: feedback@sudha.co.in